ರಾಜ್ಯದಲ್ಲಿ ವಿದ್ಯುತ್ ಕ್ಷಾಮ

46(343); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಪ್ರತಿದಿನ ರಾಜ್ಯದಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಕೊರತೆ ಇದೆ;

ಆ) ಏಪ್ರಿಲ್ 2015ರ ವೇಳೆಗೆ ಉಂಟಾಗಬಹುದಾದ ವಿದ್ಯುತ್ ಕೊರತೆ ಎಷ್ಟು;

ಇ) ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಪ್ರಾರಂಭವಾಗುವುದರಿಂದ ಲೋಡ್ ಶೆಡ್ಡಿಂಗ್ ಇಲ್ಲದೆ ವಿದ್ಯುತ್ ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಬೇಡಿಕೆಗೆ ಅನುಗುಣವಾಗಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ (ಇಂಧನ ಸಚಿವರು)

ಅ) ಪ್ರಸ್ತುತ, ರಾಜ್ಯದಲ್ಲಿ ಪ್ರತಿದಿನ ಅಂದಾಜು 1,400 ಮೆಗಾವ್ಯಾಟ್‌ಗಳ ನಿರ್ಬಂಧಿತ ವಿದ್ಯುತ್ ಕೊರತೆಯಿರುತ್ತದೆ

ಆ) ಏಪ್ರಿಲ್ 2015ರ ವೇಳೆಗೆ 800 ಮೆಗಾವ್ಯಾಟ್‌ಗಳ ವಿದ್ಯುತ್ ಕೊರತೆ ಉಂಟಾಗಬಹುದೆಂದು ಅಂದಾಜಿಸಲಾಗಿದೆ.

ಇ) ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಅನುಕೂಲವಾಗುವಂತೆ ಸಮರ್ಪಕ ವಿದ್ಯುತ್ ಪೂರೈಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ರಾಜ್ಯದ ಎಲ್ಲಾ ವಿದ್ಯುತ್ ಉತ್ಪಾದನಾ ಘಟಕಗಳು ಹೆಚ್ಚಿನ ಕಾರ್ಯಕ್ಷಮತೆಯಿಂದ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

- ಗ್ರಾಮೀಣ ಪ್ರದೇಶಗಳಲ್ಲಿ ನೀರಾವರಿ ಪಂಪ್‌ಸೆಟ್‌ಗಳನ್ನು ಅಧಿಕ ಹೊರೆ ರಹಿತ ಸಮಯದಲ್ಲಿ ಉಪಯೋಗಿಸುವಂತೆ ರೈತರಿಗೆ ಕೋರಲಾಗಿದೆ.
- ರಾಜ್ಯದಲ್ಲಿ ಘೋಷಿತ ಅವಧಿಯಂತೆ ನಗರ/ಪಟ್ಟಣ ಪ್ರದೇಶಗಳಲ್ಲಿ ದಿನವಹಿ 22–24 ಗಂಟೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 7 ಗಂಟೆಗಳ 3 ಫೇಸ್ ವಿದ್ಯುತ್ (2 ಬ್ಯಾಚ್‌ಗಳಲ್ಲಿ) ಹಾಗೂ ಸಂಜೆ 6 ರಿಂದ ಬೆಳಿಗ್ಗೆ 6 ರವರೆಗೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.
- ಅಲ್ಲದೆ, ಮಧ್ಯಮಾವಧಿ/ಅಲ್ಪಾವಧಿ ಆಧಾರದಲ್ಲಿ ವಿದ್ಯುತ್ತನ್ನು ಖರೀದಿಸಲಾಗುತ್ತಿದ್ದು, ವಿವರಗಳು ಕೆಳಕಂಡಂತಿವೆ.
    - ಮಧ್ಯಮಾವಧಿ ಆಧಾರದಲ್ಲಿ 1500 ಮೆಗಾವ್ಯಾಟ್ ವಿದ್ಯುತ್ತನ್ನು ದಿನಾಂಕ 01–08–2013 ರಿಂದ 30–06–2015 ರವರೆಗೆ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.
    - ಅಲ್ಪಾವಧಿ ಆಧಾರದಲ್ಲಿ 500 ಮೆಗಾವ್ಯಾಟ್ ವಿದ್ಯುತ್ತನ್ನು RTC ವಿಧಾನದಲ್ಲಿ ದಿನಾಂಕ 15–11–2014 ರಿಂದ 30–06–2015ರವರೆಗೆ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ ಮತ್ತು M/s. Global ಖಾಸಗಿ ಉತ್ಪಾದಕರಿಂದ ಜನವರಿ–2015 ರಿಂದ ಜೂನ್ 2015 ರವರೆಗೆ 150 ಮೆಗಾವ್ಯಾಟ್‌ಗಳ ವಿದ್ಯುತ್ತನ್ನು ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.
    - ಅಲ್ಲದೆ, ಮುಂಬರುವ ದಿನಗಳಲ್ಲಿ ಅಧಿಕ ವಿದ್ಯುತ್ ಹೊರೆಯನ್ನು ನಿಭಾಯಿಸಲು RTC ವಿಧಾನದಲ್ಲಿ 250 ಮೆಗಾವ್ಯಾಟ್‌ಗಳ ವಿದ್ಯುತ್ತನ್ನು ಫೆಬ್ರವರಿ–2015 ರಿಂದ ಜೂನ್–2015 ರವರೆಗೆ ಖರೀದಿಸಲು KERC ರವರ ಅನುಮತಿ ಕೋರಲಾಗಿದೆ.

ಈ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ, ವಿದ್ಯುತ್ ಸ್ವಾವಲಂಬನೆಯನ್ನು ಸಾಧಿಸಲು ಸರ್ಕಾರವು ಕೆಳಕಂಡ ದೀರ್ಘಾವಧಿ ಯೋಜನೆಗಳನ್ನು ಕೈಗೊಂಡಿರುತ್ತದೆ.

- KPCL ವತಿಯಿಂದ 700 ಮೆಗಾವ್ಯಾಟ್ ಸಾಮರ್ಥ್ಯದ BTPS ಘಟಕ–3 ಸ್ಥಾಪನೆಗೆ ಕ್ರಮ.
- KPCL ವತಿಯಿಂದ 1600 ಮೆಗಾವ್ಯಾಟ್ ಸಾಮರ್ಥ್ಯದ ಯರಮರಸ್ ಯೋಜನೆಯ ಸ್ಥಾಪನೆಗೆ ಕ್ರಮ.
- ಬಿಜಾಪುರ ಜಿಲ್ಲೆಯ ಕೂಡಗಿಯಲ್ಲಿ 4,000 ಮೆಗಾವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರ, ರಾಜ್ಯದ ಪಾಲು 2000 ಮೆಗಾವ್ಯಾಟ್ (NTPC ರವರ ಸಹಯೋಗದೊಂದಿಗೆ)
- KPCL ವತಿಯಿಂದ ರಾಯಚೂರು ಜಿಲ್ಲೆಯ ಯಡ್ಲಾಪುರದಲ್ಲಿ 800 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.
- KPCL ವತಿಯಿಂದ ಛತ್ತೀಸ್‌ಗಢದಲ್ಲಿ 1,600 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.
- KPCL ವತಿಯಿಂದ ಬಿಡದಿ ವಿದ್ಯುತ್ ಕೇಂದ್ರದಲ್ಲಿ ಮೊದಲ 700 ಮೆಗಾವ್ಯಾಟ್ ಸಾಮರ್ಥ್ಯದ ಅನಿಲಾಧಾರಿತ ಘಟಕ ಸ್ಥಾಪನೆಗೆ ಕ್ರಮ.
- ಖಾಸಗಿಯವರಿಂದ ಗುಲ್ಬರ್ಗಾ ಮತ್ತು ಘಟಪ್ರಭಾದಲ್ಲಿ ತಲಾ 1,320 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.